ಹುಬ್ಬಳ್ಳಿಯ ಕೋರ್ಟ್ ಸರ್ಕಲ್ ಹತ್ತಿರದ ಕೋರಿಯರ್ ಕಚೇರಿಯಲ್ಲಿ ಯಮನೂರಪ್ಪ ತನ್ನ ಕೆಲಸ ಮುಗಿಸಿದಾಗ ಆಗಲೇ ಸಂಜೆ ಏಳಾಗಿತ್ತು. ಚಹಾದ ಹುಡುಗ ಬಂದ. ಪ್ಲಾಸ್ಟಿಕ್ಕಿನ ಕಪ್ಪಿನಲ್ಲಿ ಅವನು ಹಾಕಿ ಕೊಟ್ಟ ಚಹಾ ಕುಡಿದಾಗ ಯಮನೂರಪ್ಪನಿಗೆ ದಣಿವೆಲ್ಲಾ ಬೊಗಸೆಯೊಳಗಿನ ಬೆರಳ ಸಂದುಗಳಿಂದ ನೀರು ಸೋರಿ ಹೋದಂತೆನಿಸಿ ನಿರುಮ್ಮಳನಾದ. ಅವರ ಮನೆ, ಇವರ ಮನೆಗೆಂದು ಬಂದ ಕೋರಿಯರ್ ತಲುಪಿಸಲು ಬೈಕ್‌ನಲ್ಲಿ ಸುತ್ತಿದ್ದರಿಂದ ಮೈಯೊಳಗೆ ದಣಿವು ತೂರಿಕೊಂಡಿತ್ತು. ಅದರಲ್ಲೂ ಗಾಳಿ, ದೂಳು, ಸುರಿವ ಬಿಸಿಲು, ವಾಹನಗಳ ಹೊಗೆ, ಹುಡುಕಿದರೂ ಸಿಗದ ಕೋರಿಯರ್ ಬಂದ ಮನೆಯ ವಿಳಾಸ ಎಲ್ಲವೆಲ್ಲವೂ ಮೈ, ಮನಸ್ಸು ಹಣ್ಣಾಗಿಸಿ ಅವನನ್ನು ದಣಿವಿನಲ್ಲಿ ಅದ್ದಿ ತೆಗೆದಂತೆ ಮಾಡಿ ಬಿಡುತ್ತಿದ್ದವು. ಯಮನೂರಪ್ಪನಿಗೆ ಇಪ್ಪತ್ತೈದೋ ಇಪ್ಪತ್ತಾರೋ ವಯಸ್ಸಿರಬಹುದು. ದಿನಪೂರ್ತಿ ಬೈಕ್‌ನಲ್ಲಿ ಹುಬ್ಬಳ್ಳಿಯಂತಹ ಶಹರ ಸುತ್ತುವುದೆಂದರೆ ಎಂತಹ ಹರೆಯದವನಿಗೂ ದಣಿವಾಗಲೇಬೇಕು.

ಚಹಾ ಕುಡಿದ ನಂತರ ಯಮನೂರಪ್ಪನಿಗೆ ಮನಸ್ಸು ಹೂ ಹಗುರವೆನಿಸಿ ಒಂದು ರೀತಿಯ ಹುಕಿ ಬಂದಂತೆನಿಸಿತು. ಕೆಲಸ ಮುಗಿದಿದ್ದೂ ಹುಕಿ ಬರಲು ಕಾರಣವಿರಬಹುದು. ಬೈಕ್ ಸುರು ಮಾಡಿ ವಿದ್ಯಾನಗರದಲ್ಲಿರುವ ಬಾಡಿಗೆ ರೂಮಿನ ಕಡೆ ಸವಾರಿ ಬೆಳೆಸಿದ. ಕೋರ್ಟ್ ದಾಟಿ ಸಾಯಿಬಾಬಾನ ಗುಡಿಯ ಹತ್ತಿರ ಬೈಕ್ ತರುಬಿದ. ಗುರುವಾರವಾದ್ದರಿಂದ ಸಾಯಿಬಾಬಾನ ಗುಡಿಯಲಿ ಭಕ್ತರ ದಂಡೇ ಜಮೆಯಾಗಿತ್ತು. ಅವರೊಳಗೆ ತಾನೂ ನುಗ್ಗಿಕೊಂಡು ಸಾಯಿಬಾಬಾನಿಗೆ ಒಂದು ನಮಸ್ಕಾರ ಹೊಡೆದು ಅಲ್ಲೇ ಹತ್ತಿರದಲ್ಲಿರುವ ಜನತಾ ಬಜಾರಿನಲ್ಲಿ ಮಲ್ಲಿಗೆ ಹೂ ತರಲೆಂದು ಹೊರಟ. ರೈಲ್ವೆ ನಿಲ್ದಾಣದ ಕಡೆ, ಹಳೇ ಬಸ್ ನಿಲ್ದಾಣದ ಕಡೆ ಹೊರಟ ವಾಹನಗಳ ಭರಾಟೆಯಲ್ಲಿ ಆ ಕಡೆ ಈ ಕಡೆ ನೋಡಿಕೊಂಡು ರೋಡ್ ಕ್ರಾಸ್ ಮಾಡಿದ. ಜನತಾ ಬಜಾರದ ಅಂಗಡಿಗಳು ಲೈಟಿನ ಬೆಳಕಿನಲ್ಲಿ ಲಕಲಕಿಸತೊಡಗಿದ್ದವು. ಜೀನ್ಸ್, ಟೀ ಶರ್ಟ್ ಧರಿಸಿದ್ದ ಹುಡುಗಿಯರೂ ಲೈಟ್‌ಗಳಂತೆ ಫಳ ಫಳಗುಟ್ಟತೊಡಗಿದ್ದರು. ಬಜಾರಿನಲಿ ಕಂಡ ಹುಡುಗಿಯರ ಚೆಲುವು ಕಣ್ತುಂಬಿಕೊಳ್ಳುತ್ತಾ ಮೊಳ ತಾಜಾ ಮಲ್ಲಿಗೆ ಹೂ ಖರೀದಿಸಿದ. ರೂಮಿನಲ್ಲಿ ತಿನ್ನಲೆಂದು ಡಜನ್ ಬಾಳೆಹಣ್ಣು ಖರೀದಿಸಿ ಸಾಯಿಬಾಬಾನ ಗುಡಿ ಹತ್ತಿರ ತರುಬಿದ್ದ ಬೈಕ್ ಸುರು ಮಾಡಿ ರೂಮಿನ ಕಡೆ ಪ್ರಯಾಣ ಬೆಳೆಸಿದ. ಸಂಜೆಯಾದ್ದರಿಂದ ಟ್ರಾಫಿಕ್ ಇತ್ತು. ಬಸ್, ಆಟೊ, ಬೈಕ್ ಎಲ್ಲ ಹುಳುಗಳು ಸರಿದಂತೆ ಚಲಿಸತೊಡಗಿದ್ದವು. ಕಿವಿಗಡಚಿಕ್ಕುವ ಹಾರ್ನ್ ಶಬ್ದ... ಎಲ್ಲ ಸೇರಿ ರೂಮು ಬಂದರೆ ಸಾಕೆನಿಸುವಂತೆ ಮಾಡಿದ್ದವು.